

# ದ್ವಿಪದಿಗಳು

ಪ್ರೇಮದ ಲಾವಣ್ಯಕೆ ಮನಸೋತು ಮೋಹಿಸಿದ್ದೆ ಬಂತು
ಅಯ್ಯೊ, ಕೊನೆಗೂ ಪ್ರೀತಿಯೆಂದರೇನೆಂದು ಅರಿಯದೆ ಹೋದೆ

★

ಇಂದೇಕೊ ಇರುಳು ಉದಾಸವಿದೆಯಲ್ಲ ತಾರೆಗಳ ಹಣತೆ ಹಚ್ಚೋಣ
ಮೇಲೆ ಅವನ ಕಂಗಳು ಕುರುಳಿನ ಪ್ರಸ್ತಾಪವಿರಲಿ ಕಣ್ಣಹನಿ ಜಾರಲು

★

ಕ್ಷಿತಿಜದಂಚಿನಲ್ಲಿ ನಡೆಯುತ್ತ ಬದುಕಿನ ಅರ್ಥ ಹುಡುಕಿದೆ
ಯಾರಿದಕೆ ಉತ್ತರಿಸಬೇಕು 'ಮುಕ್ತಾ' ಕೊನೆಯಿರದ ಹಾದಿ ಇದು

★

ಈ ಮಧುವಿನಿಂದಲೆ ಮತ್ತೇರಿತೆಂದರೆ ಪ್ರಿಯಾ
ನಿನ್ನ ಮದಭರಿತ ಕಂಗಳು ಮುನಿದವೇತಕೊ

★

ಬದುಕು ಇನ್ನೂ ಆರಂಭವೇ ಆಗಲಿಲ್ಲ ಆಗಲೆ ಸಂಜೆಯಾಯಿತು
ಎಲ್ಲ ಮರೆಸಿ ಮತ್ತೇರುವಂತೆ ಕುಡಿಸು ಕರುಣೆ ತೋರು ಸಾಕಿ

★

ನಿನಗಾಗಿ ನಾನು ಬಾಂದಳದುದ್ದಕ್ಕೂ ಸಂಜೆಯಂತೆ ಅಲೆದಿದ್ದೇನೆ
ನೀನು ಸಿಗುವುದಿರಲಿ ನಿನ್ನ ಸುದ್ದಿಯೂ ತಿಳಿಯದಾಯಿತಲ್ಲ

★

ನಿನ್ನ ಕಣ್‌ರೆಪ್ಪೆಯ ನೆರಳಿನಡಿ ಬದುಕಿದ್ದರೂ
ಒಮ್ಮೊಮ್ಮೆ ಹೃದಯ ಒಂಟಿಯಾಗಿರಲು ಬಯಸುತ್ತದೆ.

● ಎಚ್.ಎಸ್. ಮುಕ್ತಾಯಕ್ಕ

ಕಲೆ: ವಾಗೀಶ ಹೆಗಡೆ

